# ಭಾರತೀಯ ಜನತಾ ಪಾರ್ಟಿ

(ಕೇಂದ್ರ ಕಚೇರಿ)
11, ಅಶೋಕ ರಸ್ತೆ, ನವದೆಹಲಿ–110001
ದೂರವಾಣಿ ಸಂಖ್ಯೆ: 23005700; ಫ್ಯಾಕ್ಸ್: 23005787


ದಿನಾಂಕ: ಜನವರಿ 30, 2014

## ಭಾಜಪ ರಾಷ್ಟ್ರೀಯ ವಕ್ತಾರ ಮತ್ತು ಸಂಸದ ಶ್ರೀ ಪ್ರಕಾಶ್ ಜಾವ್ಡೆಕರ್ ನೀಡಿದ ಪತ್ರಿಕಾ ಹೇಳಿಕೆ

1. ಭಾರತೀಯ ರಿಸರ್ವ್ ಬ್ಯಾಂಕ್ ದಿಢೀರನೆ ಬ್ಯಾಂಕ್ ದರವನ್ನು 0.25 ಬೇಸಿಸ್ ಪಾಯಿಂಟ್ ಏರಿಸಲು ನಿರ್ಧರಿಸಿದ್ದು, ಇದರಿಂದ ಬೆಲೆಗಳು ಇಳಿಮುಖವಾಗಲು ಸಾಧ್ಯವಿಲ್ಲ, ಬದಲಾಗಿ ಇದು ಪ್ರತಿಕೂಲ ಪ್ರಭಾವ ಬೀರಲಿದ್ದು, ಬೆಲೆಗಳು ಹೆಚ್ಚುವ ಸಾಧ್ಯತೆಯಿದೆ. ಯುಪಿಎ ಸರ್ಕಾರ ಬ್ಯಾಂಕ್ ದರ, ಸಿಆರ್ಆರ್, ರೆಪೋ ದರ ಹಾಗೂ ರಿವರ್ಸ್ ರೆಪೊ ದರವನ್ನು ಹಲವು ಬಾರಿ ಹೆಚ್ಚಿಸಿದ್ದರು ಅದರಿಂದ ಪ್ರಯೋಜನವಾಗಿಲ್ಲ. ಕೇವಲ ಬಡ್ಡಿ ದರ ಹೆಚ್ಚಿಸಿ ಬೇಡಿಕೆ ತಗ್ಗಿಸುವ ಏಕೈಕ ಮಾರ್ಗವನ್ನು ಸರ್ಕಾರ ಅನುಸರಿಸಿದೆ.

   ಎನ್‌ಡಿಎ ನಿರ್ಗಮಿಸಿದಾಗ ಬ್ಯಾಂಕ್ ದರ ಹಾಗೂ ರೆಪೊ ದರ ಶೇಕಡ 6ರಷ್ಟಿತ್ತು. ಅದನ್ನು ಯುಪಿಎ ಸರ್ಕಾರ ಶೇಕಡ 9ಕ್ಕೆ ಏರಿಸಿದೆ. ಈ ಕ್ರಮದಿಂದ ಗರಿಷ್ಠ ಬಡ್ಡಿ ದರದ ನೀತಿ ಜಾರಿಗೆ ಬಂದು ರಫ್ತು ಕೈಗಾರಿಕೆಗಳಿಗೆ ಮಾರಕವಾಗಿ ಪರಿಗಣಿಸಿ, ಮಧ್ಯಮವರ್ಗಕ್ಕೆ ಇಎಂಐ ಅಥವಾ ತಿಂಗಳ ಸಮಪಾತ ಸಾಲ ಮರುಪಾವತಿ ಕಂತು ಹೆಚ್ಚಿದೆ. ಹಣಕಾಸು ವೆಚ್ಚ ಉಲ್ಬಣಿಸಿ ಅರ್ಥವ್ಯವಸ್ಥೆಯ ಎಲ್ಲಾ ವಲಯಗಳ ಮೇಲೆ ಪ್ರತಿಕೂಲ ಪ್ರಭಾವ ಬೀರಿದೆ.

   ವಿತರಣಾ ಭಾಗದ ವಿಚಾರಗಳಲ್ಲಿ ಯಶಸ್ವಿ ಕಾರ್ಯಾಚರಣೆ ನಡೆಸಲು ಯುಪಿಎ ಸರ್ಕಾರ ಎಂದೂ ಯಶಸ್ವಿಯಾಗದ ಕಾರಣ ಹಣದುಬ್ಬರ ನಿಯಂತ್ರಿಸಲು ಅದಕ್ಕೆ ಆಗಿಲ್ಲ. ಮನಮೋಹನ್ ಸಿಂಗ್ ಹಾಗೂ ಚಿದಂಬರಂ ಅವರು ಸಮಸ್ಯೆಯ ಉಪಶಮನಕ್ಕೆ ವಿನೂತನ ಉಪಾಯಗಳನ್ನು ಹುಡುಕುವಲ್ಲಿ ವಿಫಲರಾದ್ದರಿಂದಲೇ ಅರ್ಥವ್ಯವಸ್ಥೆಗೆ ಕಾಯಕಲ್ಪ ನೀಡಲು ಸಾಧ್ಯವಾಗಲಿಲ್ಲ.

2. ಎಲ್‌ಪಿಜಿ ಸಿಲೆಂಡರ್‌ಗಳ ಗರಿಷ್ಠ ಮಿತಿಯನ್ನು ಪ್ರತಿ ವರ್ಷ ಒಂದು ಕುಟುಂಬಕ್ಕೆ 9 ರಿಂದ 12ಕ್ಕೆ ಏರಿಸುವ ಕಾಂಗ್ರೆಸ್ ಸರ್ಕಾರದ ನಿರ್ಧಾರವನ್ನು ಜನರು ತುಂಬು ಹೃದಯದಿಂದ ಸ್ವಾಗತಿಸುತ್ತಾರೆ ಎಂಬ ಆಸೆಯಿತ್ತು. ಕಾಂಗ್ರೆಸನ್ನು ಹೊಗಳುವ ಮನಸ್ಥಿತಿಯಲ್ಲಿ ದೇಶದ ಜನರು ಇಲ್ಲ. ಇದಕ್ಕೆ ಬದಲು ಅವರು ಕೇಳುತ್ತಿರುವ ಸರಳ ಪ್ರಶ್ನೆಯೆಂದರೆ, ಸಿಲಂಡರ್‌ಗಳ ಗರಿಷ್ಠ ಮಿತಿಯನ್ನು 6ಕ್ಕೆ ಇಳಿಸುವ ಅಗತ್ಯವಾದರು ಏನಿತ್ತು? ಎಲ್ಲಾ ಪದಾರ್ಥಗಳ ಬೆಲೆಗಳು ಏರಿರುವಾಗ ಎಲ್‌ಪಿಜಿ ಸಿಲೆಂಡರ್‌ಗಳ ಗರಿಷ್ಠ ಮಿತಿ ತಗ್ಗಿಸುವ ನಿರ್ಧಾರ

ಜನವಿರೋಧಿಯಾಗಿತ್ತು. ಈ ಕ್ರಮಕ್ಕೆ ಜನರು ಯುಪಿಎ ಸರ್ಕಾರವನ್ನು ಎಂದೂ ಕ್ಷಮಿಸಿ ಮರೆಯಲು ಸಾಧ್ಯವಿಲ್ಲ. 2012ರ ಜುಲೈವರೆಗೂ ಎಲ್ಲಾ ಕುಟುಂಬಗಳು ತಮಗೆ ಅಗತ್ಯ ಎಲ್‌ಪಿಜಿ ಸಿಲೆಂಡರ್‌ಗಳನ್ನು ವಿನಾಯತಿ ದರದಲ್ಲಿ ಪಡೆಯುತ್ತಿದ್ದರು. ಈ ಸೌಲಭ್ಯವನ್ನು ಯುಪಿಎ ಸರ್ಕಾರ ಆಗಸ್ಟ್ 2012ರಂದು ಹಿಂಪಡೆಯಿತು.

ಎನ್‌ಡಿಎ ಸರ್ಕಾರ ಅಧಿಕಾರದಿಂದ ನಿರ್ಗಮಿಸಿದಾಗ ಎಲ್‌ಪಿಜಿಯ ವಿನಾಯತಿ ದರ 244 ರೂಪಾಯಿಗಳಾಗಿತ್ತು ಇಂದು ಆ ಬೆಲೆ ರೂ.415ಕ್ಕೆ ಏರಿದೆ ಹಾಗೂ ಜನರು ಇಂದು ಪ್ರತಿಯೊಂದು ಸಿಲಿಂಡರನ್ನು ಮುಕ್ತ ಮಾರುಕಟ್ಟೆಯಿಂದ 1241 ರೂಪಾಯಿ ಬೆಲೆಗೆ ಖರೀದಿಸಬೇಕಾಗಿದೆ. ಮಹತ್ವಾಕಾಂಕ್ಷೆಯ ಡಿಬಿಟಿ ಯೋಜನೆ ಈಗಲು ಎಲ್ಲರಿಗು ತಲುಪಿಲ್ಲ ಹಾಗೂ ಪ್ರತಿಯೊಂದು ಕುಟುಂಬಗಳಿಗೆ ಅದರ ಲಾಭ ಲಭಿಸಿಲ್ಲ.

(ಎಆರ್. ಅರುಣ್ ಕುಮಾರ್ ಜೈನ್)

ಕಚೇರಿ ಕಾರ್ಯದರ್ಶಿ